ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೆ.....

ಉಪಾಧ್ಯಕ್ಷರು : ಒಂದೋ, ಎರಡೋ ಕ್ಲಾರಿಫಿಕೇಷನ್ ಕೇಳಿದಿರಿ. 2–3 ಕ್ಕೆ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ವಸೂಲಿ ಮಾಡಿಕೊಟ್ಟರೆ.....

ಉಪಾಧ್ಯಕ್ಷರು : ಅವರು ಮಾಡಿಕೊಡುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಗೋವಿಂದ ಎಂ. ಕಾರಜೋಳ : ನದಿಗೆ ಬಸ್ ಬಿದ್ದು ಸತ್ತರು, ಕೆನಾಲ್‌ಗೆ ಬಸ್ ಬಿದ್ದು ಸತ್ತರು, ಆ ಡ್ರೈವರ್ ಹಾಗೂ ಕಂಡಕ್ಟರ್ ಕಡೆಯಿಂದ ವಸೂಲು ಮಾಡಿ ಕೊಟ್ಟಿದ್ದೀರಾ ? ಇದು ಅಲ್ಲ ಉತ್ತರ. ಸರ್ಕಾರ ಎಂದ ಮೇಲೆ ನೀವು ಯಾರ ಕಡೆಯಿಂದ ವಸೂಲು ಮಾಡುತ್ತೀರೋ, ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ ಅದು ನಮಗೆ ಸಂಬಂಧಪಟ್ಟಿದ್ದಲ್ಲ. ಬಡವರಿಗೆ ನೇರವಾಗಿ ಪರಿಹಾರವನ್ನು ನೀವು ಘೋಷಿಸಿ. ನೀವು ಅವರನ್ನು ಕೇಳಿ ಅವರಿಂದ ವಸೂಲಿ ಮಾಡಿ ಕೊಡುತ್ತೇವೆಂದರೆ ಏನು ಸ್ವಾಮಿ ಇದು. ಇದಕ್ಕೆ ಸರ್ಕಾರ ಎನ್ನುತ್ತಾರೆಯೇ? ಇದು ಸರ್ಕಾರದ ಉತ್ತರಾನಾ?

ಶ್ರೀ ಅರಗ ಜ್ಞಾನೇಂದ್ರ : ಮೊನ್ನೆ ತಾನೇ ಸುನಾಮಿಗೆ ಕೊಟ್ಟಿವಲ್ಲಾ ಅದಕ್ಕೆ ನಮಗೇನು ಕಾನೂನು ಅಡ್ಡಿ ಬಂತಾ? ಯಾರೋ ಬಡವರು ಅದು ನಿಮ್ಮ ಕೆಲಸ ಮಾಡುವಾಗ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ನೀರಿನ ಟ್ಯಾಂಕ್ ಕಟ್ಟುವಾಗ ಅದು ಕುಸಿದು ಬಿದ್ದು ಸತ್ತರು ಎಂದರೆ, ತಕ್ಷಣ ಸರ್ಕಾರ ಹೋಗಿ ಅವರಿಗೆ ಸಾಂತ್ವನ ಹೇಳುವಂಥ ಪ್ರಯತ್ನಗಳು ಆಗಬೇಕಲ್ಲವೇ? ಅವರಿಗೆ ಪರಿಹಾರಗಳನ್ನು ಕೊಡಬೇಕು. ಸುನಾಮಿಗೆ ಕೊಡಬೇಕಾದರೆ ಇಲ್ಲ, ಅದಕ್ಕೆ ಬರುವುದಿಲ್ಲ ಅದು ಸಮುದ್ರದಿಂದ ಆಗಿದೆ, ಅದಕ್ಕೆ ಬೇರೆಯವರು ನೋಡಿಕೊಳ್ಳಬೇಕೆಂದು ನಾವು ಯಾರಾದರೂ ಹೇಳಿದೆವಾ? ಇಲ್ಲವಲ್ಲಾ.

ಶ್ರೀ ಬಿ. ಸತ್ಯನಾರಾಯಣ : ಕೊಡುವುದಿಲ್ಲವೆಂದು ಹೇಳಲಿಲ್ಲ, ನಾನು ಎಷ್ಟು ಕೊಡಬೇಕೆಂದು ಚರ್ಚೆ ಮಾಡಿ ಹೇಳುತ್ತೇನೆಂದು ಹೇಳಿದೆ.

ಶ್ರೀ ಎನ್. ಯೋಗೀಶ್ ಭಟ್ : ಹೆಲಿಕ್ಯಾಪ್ಟರ್‌ನಲ್ಲಿ ಬಂದು ಎರಡು ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದಾರೆ.

(ಈ) ವಿಷಯ: ರಾಜ್ಯದಲ್ಲಿರುವ ಕುದುರೆಮುಖ ಕಬ್ಬಿಣ ಅದಿರು ಕಂಪನಿಯಿಂದ ಕೋಟ್ಯಾಂತರ ರೂಪಾಯಿಗಳು ಸರ್ಕಾರಕ್ಕೆ ಆದಾಯ ಬರುವುದರಿಂದ ಅದನ್ನು ಮುಚ್ಚದೆ ಉಳಿಸಿಕೊಳ್ಳುವ ಬಗ್ಗೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ) : ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿರುವ ಕುದುರೆಮುಖ ಕಬ್ಬಿಣ ಅದಿರು ಕಂಪನಿಯಿಂದ ಕೋಟ್ಯಾಂತರ ರೂಪಾಯಿಗಳು ಸರ್ಕಾರಕ್ಕೆ ಆದಾಯ ಬರುವುದರಿಂದ ಅದನ್ನು ಮುಚ್ಚದೆ ಉಳಿಸಿಕೊಳ್ಳಲು ಮಾನ್ಯ ಭಾರೀ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಸಚಿವರು) : ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಮಾಡಲಿಚ್ಚಿಸುತ್ತೇನೆ.

ಮೆ:ಎನ್.ಎಂ.ಡಿ.ಸಿ. ರವರಿಗೆ ದಿನಾಂಕ : 25.07.1969 ರಿಂದ ಅನ್ವಯವಾಗುವಂತೆ 30 ವರ್ಷಗಳ ಅವಧಿಗೆ ಕಬ್ಬಿಣದ ಅದಿರು ಖನಿಜಕ್ಕಾಗಿ 5218–00 ಹೆಕ್ಟೇರ್ ಪ್ರದೇಶವು ಗಣಿ ಗುತ್ತಿಗೆ ಸಂಖ್ಯೆ: 909, ಚಿಕ್ಕಮಗಳೂರು ಜಿಲ್ಲೆಯ, ಮೂಡಿಗೆರೆ ತಾಲ್ಲೂಕಿನ ಆರೋಳಿರೇಂಜ್‌ನ ಭದ್ರಾ ಅರಣ್ಯದಲ್ಲಿ ಮಂಜೂರಾಗಿತ್ತು. ಏತನ್ಮಧ್ಯೆ, 5218–00 ಹೆಕ್ಟೇರ್ ಪ್ರದೇಶದ ಪೈಕಿ 613–00 ಹೆಕ್ಟೇರ್ ಪ್ರದೇಶವನ್ನು ಅಧ್ಯರ್ಪಣೆ ಮಾಡಲಾಗಿತ್ತು. ನಂತರ, ಸದರಿ ಗಣಿ ಗುತ್ತಿಗೆಯನ್ನು ಮೆ: ಸ್ಟೀಲ್ ಅಥಾರಿಟಿ ಆಫ್ ಇಂಡಿಯಾರವರಿಗೆ ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿಐ .184 : ಇ ಎಂ ಡಿ. 75 ದಿನಾಂಕ: 07.11.1975 ರಲ್ಲಿ ದಿನಾಂಕ: 10.12.1975 ರಿಂದ ಅನ್ವಯವಾಗುವಂತೆ ವರ್ಗಾವಣೆ ಮಾಡಲಾಗಿತ್ತು. ನಂತರ, ಮೆ: ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತರವರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ.167 : ಇ ಎಂ ಜಿ ಓ. 76 ದಿನಾಂಕ : 13.10.1976 ರಂತೆ ವರ್ಗಾವಣೆ ಹೊಂದಿ ದಿನಾಂಕ: 10.11. 1976 ರಂದು ಅಮಾಲ್ಜಾರಿ ಮಾಡಲಾಯಿತು.

ಮೆ: ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತ ರವರು ದಿನಾಂಕ : 22.06.1998 ರಂದು ನವೀಕರಣಕ್ಕಾಗಿ 43 ಎಎಂಎಲ್, 98 ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕೋರಿರುವ ಪ್ರದೇಶವು ಅರಣ್ಯ ಪ್ರದೇಶವಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ, 41: ಎಫ್ ಎಫ್ ಎಂ. 98 ದಿನಾಂಕ:06.07.1999ರಲ್ಲಿ 1452–74 ಹೆಕ್ಟೇರ್ ಗಣಿಗಾರಿಕೆ ನಡೆಸಿದ್ದ ಪ್ರದೇಶಕ್ಕೆ ದಿನಾಂಕ: 25.07.1999 ರಿಂದ ಅನ್ವಯವಾಗುವಂತೆ 20 ವರ್ಷಗಳಿಗೆ ಮೆ:ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತ ಸಂಸ್ಥೆಯ ಪರವಾಗಿ ಮಂಜೂರಾತಿಗಾಗಿ ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ ಮತ್ತು

ಎರಡು ವರ್ಷಗಳ ಅವಧಿಗೆ ಗಣಿ ಕಾರ್ಯವನ್ನು ಮುಂದುವರೆಸಲು ಕಾರ್ಯಾನುಮತಿಯನ್ನು ನೀಡಲಾಗಿತ್ತು. ತದನಂತರ, ಭಾರತ ಸರ್ಕಾರವು ದಿನಾಂಕ: 16.07.1999ರಲ್ಲಿ ಮೊದಲಿಗೆ ಒಂದು ವರ್ಷದ ಕಾಲಾವಧಿಗೆ ತಾತ್ಕಾಲಿಕ ಕಾರ್ಯಾದೇಶವನ್ನು ನೀಡಲಾಗಿತ್ತು. ನಂತರ, ಭಾರತ ಸರ್ವೋಚ್ಚ ನ್ಯಾಯಾಲಯದ ಅದೇಶದನ್ವಯ ದಿನಾಂಕ: 31.12.2005ರವರೆವಿಗೆ ಕಾರ್ಯಾದೇಶವನ್ನು ನೀಡಲಾಗಿದೆ.

ಪರಿಸರ ಮತ್ತು ಅರಣ್ಯ ಸಚಿವಾಲಯವು ದಿನಾಂಕ: 20.07.2001 ರ ಪತ್ರದಲ್ಲಿ, ಮೆ:ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತ ಸಂಸ್ಥೆಯವರು ಹೂಡಿರುವ ಬಂಡವಾಳ, ಸಂಸ್ಥೆಯವರು ಹೊರದೇಶಗಳಿಗೆ ರಫ್ತು ಮಾಡಲು ಮಾಡಿಕೊಂಡಿರವ ಹೊಣೆಗಾರಿಕೆ ಮತ್ತು ಕಂಪೆನಿಯವರಿಂದ ಭರಿಸಲಾಗುವ ಡೆಮರೇಜ್‌ಗಳನ್ನು ಗಮನದಲ್ಲಿರಿಸಿಕೊಂಡು, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಮತ್ತು ಪರಿಸರ, ಜೀವಶಾಸ್ತ್ರ, ಇಲಾಖೆಯವರು ವಿಧಿಸುವ ಷರತ್ತುಗಳಿಗೆ ಬದ್ದರಾಗುವಂತೆ ತಿಳಿಸಿ ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ, 1980ರ ಭಾಗ–2 ರಲ್ಲಿ ನೀಡಿರುವ ವಿಮೋಚನಾ ಪತ್ರ ಸಂಖ್ಯೆ: ಎಫ್ ಇಇ. 41: ಎಫ್‌ಎಫ್‌ಎಂ, 1998 ದಿನಾಂಕ: 04.09.2003 ರಂತೆ ಕಾರ್ಯಾನುಮತಿಗೆ ಅನುಮೋದನೆಯನ್ನು ನೀಡಲಾಗಿದೆ.

ಮೆ: ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತರವರಿಂದ ಕಳೆದ 3 ವರ್ಷಗಳಲ್ಲಿ ಕೆಳಕಂಡಂತೆ ರಾಜಧನವನ್ನು ವಸೂಲಿ ಮಾಡಲಾಗಿದೆ:

ವರ್ಷ	ರಾಜಧನ
2001–02	ರೂ. 1,82,11,916.00
2002–03	ರೂ. 1,69,85,040.00
2003–04	ರೂ. 1,52,95,935.00

ಸರ್ಕಾರವು ಸದರಿ ಸಂಸ್ಥೆಯಿಂದ ಈ ರೀತಿ ಅತಿಹೆಚ್ಚಿನ ರಾಜಧನವನ್ನು ಬೊಕ್ಕಸಕ್ಕೆ ಪಡೆಯುತ್ತಿರುವುದರಿಂದ, ಇಲಾಖೆಯು ಸದರಿ ಸಂಸ್ಥೆಯು ಗಣಿ ಕಾರ್ಯವನ್ನು ಮುಂದುವರೆಸುವ ಪರವಾಗಿರುತ್ತದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕೊಠಡಿಯಲ್ಲಿ ದಿನಾಂಕ: 24.02.2005ರಲ್ಲಿ ನಡೆದ ಸಭಾ ನಡವಳಿಯಲ್ಲಿ ಸದರಿ ಸಂಸ್ಥೆಯವರು ಪಾಲಿಸುತ್ತಿರುವ ಗಣಿ ಸುರಕ್ಷತಾ ಕ್ರಮಗಳು, ನೇರವಾಗಿ 2,500 ಮಂದಿಗೆ ಉದ್ಯೋಗಾವಕಾಶ ಮಾಡಿಕೊಟ್ಟಿರುವ ಹಾಗೂ ಪರೋಕ್ಷವಾಗಿ 10,000 ಮಂದಿಗೆ

ಮಾಡಿಕೊಟ್ಟಿರುವ ಉದ್ಯೋಗಾವಕಾಶವನ್ನು ಗಮನದಲ್ಲಿರಿಸಿಕೊಂಡು, ಸದರಿಯವರ ಮನವಿಯನ್ನು ಪುರಸ್ಕರಿಸಿದೆ. ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ಸದರಿಯವರ ಅರ್ಜಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಮಾನಿಟರಿ ಕಮಿಟಿಯ ಮುಂದೆ ಹಾಜರುಪಡಿಸಲು ಆದೇಶಿಸಿ, ಸದರಿ ಕಮಿಟಿಯು ಪರಿಶೀಲಿಸಿದ ನಂತರ ನ್ಯಾಯಾಲಯವು ಪರಿಗಣಿಸುವುದಾಗಿ ಆದೇಶಿಸಿದೆ.

ಮೆ: ಕುದುರೆಮುಖ ಕಬ್ಬಿಣದ ಅದಿರು ಕಂಪನಿ ನಿಯಮಿತರವರು ಈ ಪ್ರದೇಶದಲ್ಲಿ ಬಹುಪಾಲು ಬಂಡವಾಳ ಹೂಡಿರುವುದರಿಂದ, ಸದರಿಯವರು ಗಣಿಗುತ್ತಿಗೆ ಮುಂದುವರೆಸುವ ಪರವಾಗಿ ರಾಜ್ಯ ಸರ್ಕಾರವು ನಿಲುವನ್ನು ತಾಳಿದೆ. ಈ ಪ್ರದೇಶದಲ್ಲಿ ಗಣಿಗಾರಿಕೆಯನ್ನು ಮುಚ್ಚಿದಲ್ಲಿ ಬಹುಪಾಲು ಜನರು ಉದ್ಯೋಗಾವಕಾಶವನ್ನು ಕಳೆದುಕೊಂಡು ನಿರುದ್ಯೋಗಿಗಳಾಗಿ, ನಕ್ಸಲೈಟ್ ಚಟುವಟಿಕೆಗಳಿಗೆ ಮೊರೆಹೋಗುವ ಅವಕಾಶಗಳಿರುತ್ತವೆ. ಈ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಗಣಿಗಾರಿಕೆ ಮುಂದುವರೆಸುವ ಪರವಾಗಿ ತೀರ್ಮಾನವನ್ನು ನೀಡದ ಪಕ್ಷದಲ್ಲಿ, ಸದರಿ ಕಂಪೆನಿಯವರು ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ರಮಣದುರ್ಗ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ಮಾಡಿಕೊಡಲು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಂಡಿರುತ್ತಾರೆ. ರಾಜ್ಯ ಸರ್ಕಾರವು ರಮಣದುರ್ಗ ಪ್ರದೇಶದ ಬ್ಲಾಕ್ ನಂ. 13 ರಲ್ಲಿನ ಶೇಕಡಾ 50 ರಷ್ಟು ಪ್ರದೇಶವನ್ನು ಗಣಿಗಾರಿಕೆಗಾಗಿ ಮೆ: ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತ ಸಂಸ್ಥೆಗೆ ನೀಡುವ ಬಗ್ಗೆ ಕಾಯ್ದಿಡಲು ತೀರ್ಮಾನಿಸಿದೆ. ಅದರಂತೆ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ರಾಜ್ಯ ಸರ್ಕಾರವು ಮೆ: ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತರವರು ಗಣಿಗಾರಿಕೆಯನ್ನು ಮುಂದುವರೆಸುವ ಪರವಾಗಿದ್ದಾಗ್ಯೂ, ಅಂತಿಮ ತೀರ್ಮಾನ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದಂತೆಯೇ ಆಗಬೇಕಿರುತ್ತದೆ.

ಶ್ರೀ ಎಂ.ಪಿ.ಕುಮಾರಸ್ವಾಮಿ (ಮೂಡಿಗೆರೆ) : ಮಾನ್ಯ ಉಪಾಧ್ಯಕ್ಷರೆ, ಕುದುರೆಮುಖ ಅದಿರು ಕಂಪನಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವುದರಿಂದ ನನಗೆ ತಿಳಿದ ಮಟ್ಟಿಗೆ ನನ್ನ ಗಮನಕ್ಕೆ ಬಂದಿರುವ ಕೆಲವು ಮಾಹಿತಿಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ಅಲ್ಲಿ ಎರಡು ಸಾವಿರ ಜನ ಡೈರೆಕ್ಟ್ ಎಂಪ್ಲಾಯಿಗಳು ಇದ್ದಾರೆ. ಇಷ್ಟಲ್ಲದೆ ಇನ್‌ಡೈರಕ್ಟಾಗಿ ಸುಮಾರು 10 ಸಾವಿರ ಜನ ಅಲ್ಲಿ ಅವಲಂಬಿತರಾಗಿ ಕೆಲಸ ಮಾಡುತ್ತಿದ್ದಾರೆ. ಹಾಗೆಯೇ

ಸರ್ಕಾರಕ್ಕೆ ಬರತಕ್ಕಂತ ಆದಾಯ ನನಗೆ ಗೊತ್ತಿರುವ ಮಟ್ಟಿಗೆ, ಕೆಪಿಟಿಸಿಎಲ್‌ಗೆ 200 ಕೋಟಿ, ಅರಣ್ಯ ಇಲಾಖೆಗೆ 2 ಕೋಟಿ, ಸೇಲ್ಸ್ ಟ್ಯಾಕ್ಸ್ 50 ಕೋಟಿ, ಪೊಲ್ಯೂಷನ್ ಕಂಟ್ರೋಲ್ 2 ಕೋಟಿ, ವಿದೇಶಿವಿನಿಮಯ ವರ್ಷ 900 ಕೋಟಿ ರೂಪಾಯಿ ಇದ್ದದ್ದು ಈ ವರ್ಷ 1800 ಕೋಟಿ, ನೆಟ್ ಪ್ರಾಫಿಟ್ 600 ಕೋಟಿ, ಎನ್.ಎಂ.ಪಿ.ಟಿ 25 ಕೋಟಿ, ಅಷ್ಟಲ್ಲದೆ ಎಂಟ್ರಿ ಟ್ಯಾಕ್ಸ್ 5 ಕೋಟಿ, ಹಾಗೆಯೇ ವೆಲ್‌ಫೇರ್ ದೃಷ್ಟಿಯಿಂದ ಸಂಸ್ಥೆ ಶಾಲೆ, ಕಾಲೇಜು ಹಾಗೂ ಕುಡಿಯುವ ನೀರು ರಸ್ತೆ, ಈ ದೃಷ್ಟಿಯಿಂದ ವರ್ಷಕ್ಕೆ 1 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತದೆ. ಅಷ್ಟಲ್ಲದೆ ಸುಮಾರು 4 ರಿಂದ 5 ಸಾವಿರ ಜನಗಳಿಗೆ ಮೆಡಿಕಲ್ ಕ್ಯಾಂಪ್ ಕೂಡ ಈ ಸಂಸ್ಥೆ ನಡೆಸುತ್ತದೆ. ಹೀಗಾಗಿ ಆ ಕಂಪನಿ ಮುಚ್ಚುವುದರಿಂದ ಅಲ್ಲಿ ಸುಮಾರು 10 ಸಾವಿರ ಜನರು ನಿರುದ್ಯೋಗಿಗಳಾಗುತ್ತಾರೆ. ಆದ್ದರಿಂದ ಈ ಆದಾಯದ ಜೊತೆಗೆ ಆ ಜನರ ಕಷ್ಟಗಳ ದೃಷ್ಟಿಯಿಂದ 2005 ಕ್ಕೆ ಅದನ್ನು ಮುಚ್ಚಬೇಕೆನ್ನುವ ಸರ್ವೋಚ್ಚ ನ್ಯಾಯಾಲಯದ ಆದೇಶ ಏನು ಇದೆ, ಅದನ್ನು ತಾವು ದಯಮಾಡಿ ನೋಡಿ ಅದು ರಮಣದುರ್ಗಕ್ಕೆ ವರ್ಗಾವಣೆ ಯಾಗುವವರೆಗೂ ಆ ಕಂಪನಿ ಅಲ್ಲಿಯೇ ಇರಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಇದಕ್ಕೆ ಸಂಬಂಧಪಟ್ಟ ಹಾಗೆ, ನಾವೆಲ್ಲಾ ತುಂಗಭದ್ರಾ ನದಿಯ ದಡದಲ್ಲಿರುವವರು. ನಮ್ಮ ಸ್ನೇಹಿತರಾದ ಮಾನ್ಯ ಕುಮಾರಸ್ವಾಮಿಯವರು ಕೇಳಿದ್ದು, ಅಲ್ಲಿಯ ಕಾರ್ಮಿಕರ ಹಿತದೃಷ್ಟಿಯಿಂದ, ರಮಣ ದುರ್ಗಕ್ಕೆ ಅದನ್ನು ವರ್ಗಾವಣೆ ಮಾಡುವುದಿಲ್ಲ, ಅದು ಬೇರೆ ಯಾವುದೋ ಹೊರರಾಜ್ಯಕ್ಕೆ ಹೋಗುತ್ತದೆ ಎನ್ನುವ ಅನುಮಾನದ ಆಧಾರದ ಮೇಲೆ ಅದನ್ನು ಕೇಳಿದ್ದರು. ನಮ್ಮ ಕರ್ನಾಟಕ ರಾಜ್ಯದಲ್ಲಿ ಆ ಎಲ್ಲಾ ನೌಕರರು ಇರಬೇಕೆನ್ನುವ ಉದ್ದೇಶದಿಂದ, ಹಾಗೂ ಆ ಕಾರ್ಮಿಕರು ಅಲ್ಲಿಯೇ ಇರಬೇಕೆನ್ನುವ ಉದ್ದೇಶದಿಂದ ಅವರು ಹೇಳಿದ್ದಾರೆ. ತಾವು ರಮಣ ದುರ್ಗಕ್ಕೆ ವರ್ಗಾವಣೆ ಮಾಡಲಿಕ್ಕೆ ಕಾಯ್ದಿರಿಸಿದ್ದೇವೆಂದು ಹೇಳಿದಿರಿ, ರಮಣ ದುರ್ಗ ಪ್ರದೇಶದ ಬ್ಲಾಕ್ ನಂ: 13 ರಲ್ಲಿ ಶೇಕಡ 50 ರಷ್ಟು ಕಾಯ್ದಿರಿಸಿದ್ದೇವೆಂದು ತಮ್ಮ ಉತ್ತರದಲ್ಲಿ ಹೇಳಿದಿರಿ. ಅದು ಎಷ್ಟು ಎಕರೆ ಎಂಬುದನ್ನು ದಯಮಾಡಿ ಹೇಳಿ. ಎಲ್ಲದಕ್ಕಿಂತ ಹೆಚ್ಚಾಗಿ ತಾವು ಹೇಳಿದಂಥ ಉತ್ತರದಲ್ಲಿ ಒಂದು ಆಘಾತಕಾರಿಯಾದ ಅಂಶ ಎಂದರೆ, ಆ ಒಂದು ಏರಿಯಾದಲ್ಲಿ ಗಣಿಗಾರಿಕೆಯನ್ನು ಮುಂದುವರಿಸುವುದರಲ್ಲಿ ಸರ್ಕಾರ ಫೇವರ್ ಆಗಿದ್ದೇವೆಂದು ಹೇಳಿದ್ದೀರಿ.

ದಯವಿಟ್ಟು, ಆ ಪರಿಸರದ ದೃಷ್ಟಿಯಿಂದ, ಕುದುರೆಮುಖದಲ್ಲಿ ಗಣಿಗಾರಿಕೆಯನ್ನು ಮುಂದುವರಿಸುವುದು ಒಳ್ಳೆಯದಲ್ಲವೆಂದು ಬಹಳ ದೊಡ್ಡ ಹೋರಾಟ ನಡೆದಿದೆ. ಏಕೆಂದರೆ, ತುಂಗಾ ಮತ್ತು ಭದ್ರಾ ನದಿಯಲ್ಲಿ ಅದರ ಸಿಲ್ಟ್ ಬರುವುದರಿಂದ ತುಂಬಾ ತೊಂದರೆಯಾಗುತ್ತದೆ ಮತ್ತು ಅಲ್ಲಿ ಪರಿಸರ ಹಾನಿಯಾಗಿ ಮಳೆ ಬರುವುದು ವ್ಯತ್ಯಾಸ ಆಗುತ್ತದೆ, ಅಲ್ಲಿ ಪರಿಸರ ತುಂಬಾ ವ್ಯತ್ಯಾಸ ಆಗಿ ಹವಾಮಾನದಲ್ಲಿ ವ್ಯತ್ಯಾಸ ಆಗಿದೆ ಎಂಬುದೂ ಕೂಡ ತಮಗೆ ಗೊತ್ತಿದೆ. ಅದರಿಂದಾಗಿ ಅದನ್ನು ದಯವಿಟ್ಟು ಮುಂದುವರಿಸಲು ಈ ಸರ್ಕಾರ ಫೇವರ್ ಆಗಿದ್ದರೆ ತೊಂದರೆಯಾಗುತ್ತದೆ. ಅಲ್ಲಿ ಅದನ್ನು ಮುಂದುವರಿಸಬಾರದು ಮತ್ತು ಇದನ್ನು ರಮಣ ದುರ್ಗಕ್ಕೆ ವರ್ಗಾವಣೆ ಮಾಡಬೇಕು. ಆ ಕಾರ್ಮಿಕರಿಗೂ ಕೂಡ ತೊಂದರೆಯಾಗದಿದ್ದ ಹಾಗೆ, ಅಲ್ಲಿಗೆ ವರ್ಗಾವಣೆ ಮಾಡುವ ತನಕ ಅವರಿಗೆ ಸೆಕ್ಯೂರಿಟಿಯನ್ನು ಕೊಡಬೇಕು, ರಮಣ ದುರ್ಗದಲ್ಲಿ ಶೇಕಡ 50ರಷ್ಟು 13ನೇ ಬ್ಲಾಕ್‌ನಲ್ಲಿ ಕಾದಿರಿಸಲಾಗಿದೆ ಎಂದು ಹೇಳಿದಿರಿ, ಅದನ್ನು ಸರಿಯಾಗಿ ಎಷ್ಟು ಎಕರೆ ಎಂಬುದನ್ನು ದಯಮಾಡಿ ಸ್ಪಷ್ಟಪಡಿಸಬೇಕೆಂದು ನಾನು ವಿನಂತಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರಕೊಡಿ.

ಶ್ರೀ ಜೆ. ಮಹಿಮಾ ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಕುದುರೆಮುಖ ಗಣಿಗಾರಿಕೆ ಬಗ್ಗೆ.....

ಉಪಾಧ್ಯಕ್ಷರು : ಗಮನ ಸೆಳೆಯುವ ಸೂಚನೆ ಅವಧಿಯಲ್ಲಿ ಎಲ್ಲರಿಗೂ ಅವಕಾಶ ಕೊಡುತ್ತ ಹೋದರೆ ರಾತ್ರಿ ಎರಡು ಗಂಟೆಯಾಗುತ್ತದೆ. ಆದ್ದರಿಂದ ತಾವು ಉತ್ತರ ಕೊಡಿ.

ಶ್ರೀ ಜೆ.ಮಹಿಮಾ ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ನಾನು ಇದರ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಉಪಾಧ್ಯಕ್ಷರು ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಆದ್ದರಿಂದ ತಾವು ಕುಳಿತುಕೊಳ್ಳಿ. ಉತ್ತರ ಕೊಡಿ ಇಲ್ಲದಿದ್ದರೆ ಕುಳಿತುಕೊಳ್ಳಿ ಎಂದು ನನಗೆ ಮಾನ್ಯ ಉಪಾಧ್ಯಕ್ಷರು ಹೇಳುತ್ತಿದ್ದಾರೆ.

ಶ್ರೀ ಜೆ.ಮಹಿಮಾ ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ನನ್ನ ಅಹವಾಲನ್ನು ದಯವಿಟ್ಟು ಕೇಳಬೇಕು.

ಉಪಾಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆ ಅವಧಿಯಾಗಿದೆ. ಇದರಲ್ಲಿ ಎರಡು ಕ್ಲಾರಿಫಿಕೇಶನ್ ಮಾತ್ರ ಕೇಳಬೇಕು. ಈಗಾಗಲೇ ಮಾನ್ಯ ಕುಮಾರಸ್ವಾಮಿಯವರು ಕೇಳಿದ್ದಾರೆ. ಈಗಾಗಲೇ 15 ನಿಮಿಷವಾಗಿದೆ ಮತ್ತು ಮಾನ್ಯ ಅರಗ ಜ್ಞಾನೇಂದ್ರ ಅವರು ಉಪಪ್ರಶ್ನೆಯನ್ನು ಕೇಳಿದ್ದಾರೆ. ಮತ್ತೆ ನೀವು ಪ್ರಶ್ನೆ ಕೇಳಿದರೆ ಮಾನ್ಯ ಸಚಿವರು ಉತ್ತರ ಯಾವಾಗ ಕೊಡಬೇಕು? ಇನ್ನು ಮಾತನಾಡತಕ್ಕಂಥವರು ಬಹಳ ಜನ ಇದ್ದಾರೆ. ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಮಾನ್ಯ ಸಚಿವರು ಉತ್ತರ ಹೇಳಬೇಕು. ಒಂದು ನಿಮಿಷದಲ್ಲಿ ಹೇಳಿ ದಯವಿಟ್ಟು ಮುಗಿಸಿ. ಚರಿತ್ರೆಯನ್ನು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಜೆ.ಮಹಿಮಾ ಪಟೇಲ್ (ಚನ್ನಗಿರಿ) : ಮಾನ್ಯ ಉಪಾಧ್ಯಕ್ಷರೆ, ನಮಗೆ ತೆರಿಗೆಯಿಂದ ಆದಾಯ ಬರುತ್ತದೆ ಎಂಬ ಒಂದೇ ಒಂದು ಕಾರಣಕ್ಕಾಗಿ ಅರಣ್ಯವನ್ನು ಹಾಳು ಮಾಡುವುದಕ್ಕೆ ನಾವು ಬಿಡತಕ್ಕಂಥದ್ದು ಸರಿಯಾದ ನೀತಿಯಲ್ಲ. ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ, ತೆರಿಗೆ ಬರುತ್ತದೆಂದು ಎಲ್ಲಾ ಅರಣ್ಯವನ್ನು ನಾವು ಕಡಿಯುವುದಕ್ಕೆ ಬಿಟ್ಟರೆ ಬಹಳ ಜನ ತೆರಿಗೆಯನ್ನು ಕೊಡುವುದಕ್ಕೆ ತಯಾರಿದ್ದಾರೆ. ಇದನ್ನು ಬೇರೆ ಕಡೆಗೆ ಹಸ್ತಾಂತರ ಮಾಡುವ ಮೊದಲು ಅಲ್ಲಿ ಪರಿಸರಕ್ಕೆ ಹಾನಿಯಾಗುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಿ ಹಸ್ತಾಂತರ ಮಾಡಬಹುದು. ಆದರೆ, ಕುದುರೆ ಮುಖ ಗಣಿಗಾರಿಕೆಗೆ 2005ರ ಮುಂದಕ್ಕೆ ಯಾವುದೇ ಕಾರಣಕ್ಕೂ ನಡೆಸುವುದಕ್ಕೆ ಸರ್ಕಾರ ಅನುಮತಿ ಕೊಡಬಾರದು. ಅಲ್ಲಿರತಕ್ಕಂಥ ನೌಕರರ ಬಗ್ಗೆ ನಮಗೆಲ್ಲಾ ಕಳಕಳಿ ಇದೆ. ಅಲ್ಲಿರತಕ್ಕಂಥ ನೌಕರರಿಗೆ ಮತ್ತೆ ನೌಕರಿ ಕೊಡತಕ್ಕಂಥದರ ಬಗ್ಗೆ ಸರ್ಕಾರ ಏನು ಬೇಕಾದರೂ ಕ್ರಮ ತೆಗೆದುಕೊಳ್ಳಲಿ. ಆದರೆ, ಅಲ್ಲಿ ಗಣಿಗಾರಿಕೆ ಮುಂದುವರಿಯುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ಮಾಡಿಕೊಡಬಾರದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಎರಡು ಮೂರು ಅಭಿಪ್ರಾಯಗಳನ್ನು ಬಂದಿರತಕ್ಕಂಥದ್ದನ್ನು ನಾವು ಗಮನಿಸಿದ್ದೇವೆ.

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿರಲಿಲ್ಲ. ಆದರೆ, ಹೊಸ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ತಾವು ಹೇಳಿದ್ದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೇನೆ. ಈಗ ಅವರೆಲ್ಲರೂ ಕೇಳಿರತಕ್ಕಂಥ ಪ್ರಶ್ನೆಗೆ ತಾವು ಉತ್ತರ ಕೊಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ : ಹೊಸ ಸದಸ್ಯರಿಗೆ ತಾವು ಅವಕಾಶ ಕೊಟ್ಟು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಇದಕ್ಕೆ ನಾನು ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ಈಗ ಮಾನ್ಯ ಸದಸ್ಯರೆಲ್ಲರೂ ಹೇಳಿರತಕ್ಕಂಥ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡಿರುತ್ತೇವೆ. ರಮಣದುರ್ಗದಲ್ಲಿ 50 ಪರ್ಸೆಂಟ್ ಜಾಗದಲ್ಲಿ ಎಂದು ಉತ್ತರ ಕೊಡಲಾಗಿದೆ. ಆದರೆ, 50 ಪರ್ಸೆಂಟ್ ಎಂದರೆ ಎಷ್ಟು ಎಕರೆ ಜಮೀನು ಆಗುತ್ತದೆಂಬುದನ್ನು ಹೇಳಬೇಕೆಂದು ಮಾನ್ಯ ಅರಗ ಜ್ಞಾನೇಂದ್ರರವರು ಈಗಾಗಲೇ ಕೇಳಿದ್ದಾರೆ. ಆದರೆ, ಈ ಮಾಹಿತಿ ನನ್ನ ಹತ್ತಿರ ಸಧ್ಯದಲ್ಲಿ ಇಲ್ಲ. ಈ ಮಾಹಿತಿಯನ್ನು ಅನಂತರ ಅವರಿಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಕುಮಾರಸ್ವಾಮಿಯವರು ಮತ್ತು ಮಾನ್ಯ ಮಹಿಮಾ ಪಟೇಲ್‌ರವರು ಹೇಳಿರತಕ್ಕಂಥ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಈ ವಿಷಯ ಈಗ ಸುಪ್ರೀಂ ಕೋರ್ಟ್ ಮುಂದೆ ಇದೆ. ಡಿಸೆಂಬರ್ 2005ರ ಹೊತ್ತಿಗೆ ಸುಪ್ರೀಂ ಕೋರ್ಟ್‌ನಿಂದ ಇದರ ಬಗ್ಗೆ ತೀರ್ಪು ಬರುತ್ತದೆ. ಆ ತೀರ್ಪಿನ ನಂತರ ಇದರ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕಂಥದ್ದು ಈಗ ನಮ್ಮ ಕೈಯಲ್ಲಿರತಕ್ಕಂಥ ಪ್ರಶ್ನೆಯಲ್ಲ. ಇದೆಲ್ಲದರ ಜೊತೆಗೆ ಅಲ್ಲಿ ತುಂಗಾ, ಭದ್ರಾ ಮತ್ತು ತುಂಗಾಭದ್ರಾ ನದಿಯ ನೀರು ಕೆಡುತ್ತಿದೆ. ಹಾಗೆಯೇ, ಇದರ ಒಂದು ಸಿಲ್ಟ್‌ನಿಂದ ಬಹಳ ತೊಂದರೆಯಾಗುತ್ತಿರುವುದು ಮತ್ತು ಪರಿಸರ ನಾಶವಾಗುತ್ತಿರುವುದು ನಿಜ. ಮತ್ತೆ ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ ಕುದುರೆಮುಖ ಗಣಿಗಾರಿಕೆಯಿಂದ 1 ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯ ಬರತಕ್ಕಂಥದ್ದೂ ಕೂಡ ನಿಜ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಎಲ್ಲೋ ಒಂದು ಕಡೆ ಆ ಬ್ಯಾಲೆನ್ಸನ್ನು ಸ್ಟ್ರೈಕ್ ಮಾಡಬೇಕಾಗುತ್ತದೆ. ಈ ಒಂದು ಬ್ಯಾಲೆನ್ಸನ್ನು ನಮ್ಮ ಕ್ಯಾಬಿನೆಟ್‌ನಲ್ಲಿ ಸ್ಟ್ರೈಕ್ ಮಾಡುತ್ತೇವೆ.

(ಉ) ವಿಷಯ: ಮಂಡ್ಯ ಜಿಲ್ಲೆಯಲ್ಲಿ ಸರ್ಕಾರ ಮಂಜೂರು ಮಾಡಿದ ಜಮೀನನ್ನು ಉದ್ದೇಶಿತ ಚಟುವಟಿಕೆಗಳಿಗೆ ಸಕಾಲದಲ್ಲಿ ಉಪಯೋಗಿಸಿಕೊಳ್ಳದಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ.

ಉಪಾಧ್ಯಕ್ಷರು : ಮಾನ್ಯ ಅನ್ನದಾನಿಯವರು ಸರ್ಕಾರದ ಗಮನ ಸೆಳೆಯಬೇಕು.

ಡಾ: ಕೆ.ಅನ್ನದಾನಿ(ಮಳವಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಮಂಜೂರು ಮಾಡಿದ ಜಮೀನನ್ನು